# ನೀವೇಕೆ ಬಂದಿರಿ ಇಲ್ಲಿಗೆ?

ಅರೇ! ನಿಮ್ಮೆಲ್ಲರ ಕಣ್ಣುಗಳೇಕೆ ನನ್ನತ್ತ?
ನಾನು ನಾಯಿ ಎಂದೇ?
ಬೇಡವಾದ ಅತಿಥಿ ಎಂದೇ?
ಈ ತಳಕು ಬಳುಕಿನ ವೇದಿಕೆಯಲ್ಲಿ
ನನಗೇನು ಕೆಲಸವೆಂದೇ?
ನನ್ನದೂ ಅದೇ ಅನಿಸಿಕೆ, ಅದೇ ಭಾವ...
ನೀವೇಕೆ ಬಂದಿರಿ ಇಲ್ಲಿಗೆ?

ಯಾಕಿಷ್ಟು ನಿಮ್ಮಲ್ಲಿ ಕರಗದ ಸಡಗರ?
ಹೊಳೆಹೊಳೆವ, ಒನಪು ವಯ್ಯಾರದ
ಸುಂದರಿಯರ ಕಣ್ತುಂಬಿಕೊಳ್ಳುತ್ತ
ಸಂಭ್ರಮಿಸುವ
ಖುಷಿಯ ಕಡಲಲ್ಲಿ ಮುಳುಗಿರುವ
ನಿಮಗೆ ನನ್ನಿಂದ ತಡೆಯಾಯಿತೇ?

ನನ್ನ ಕಂಡು ಹುಬ್ಬುಗಂಟಿಕ್ಕುವುದೇಕೆ?
ಈ ವೇದಿಕೆ ನಿಮ್ಮದು ಮಾತ್ರವಲ್ಲ
ನನಗೂ ಪಾಲಿದೆ ಇಲ್ಲಿ.
ನಾನು ಹುಟ್ಟಿದ್ದು ಇದೇ ವೇದಿಕೆಯ
ಸುತ್ತಲಿನ ಪರಿಸರದಲ್ಲಿ
ನನ್ನವರೂ ಇರುವ ಜಾಗವಿದು.
ನಿಮಗಿಂತಲೂ ನನಗೇ
ಇಲ್ಲಿರುವ ಹಕ್ಕು ಹೆಚ್ಚಿದೆ!

● **ವೀಣಾ ಪಿ.**



# ನನ್ನ ನಡೆ ನನ್ನದು

ನನ್ನ ನಡೆ ನನ್ನದು
ಹದಿಹರೆಯದ ವಯ್ಯಾರಿಯರೇ,
ಯಾರದೋ ರಂಗಿನ ಪೋಷಾಕು ತೊಟ್ಟು
ನಿಮ್ಮದಲ್ಲದ ಹೆಜ್ಜೆಗಳ ಹಾಕುತ್ತ
ಕೃತಕ ನಗುವನ್ನು ತುಳುಕಿಸುತ್ತ
ಸಾಗುವ ಈ ನಡೆ ನಿಮ್ಮದಲ್ಲವೇ ಅಲ್ಲ.

ಬಳ್ಳಿಯಂತೆ ಬಳಕುತ್ತ
ಬಣ್ಣ ಬಳಿದುಕೊಂಡು ಬಿನ್ನಾಣ ಮಾಡುತ್ತ
ನಡೆಯುವ ಈ ನಡೆ ನಿಮ್ಮದಲ್ಲ.

ನನ್ನದೋ ಪ್ರದರ್ಶನದ
ಒತ್ತಾಯವಿಲ್ಲದ ಸಹಜ ಜೀವನ.
ಮುಖವಾಡವಿಲ್ಲ, ಸೋಗಿಲ್ಲ
ಅನುಕರಣೆ ತಿಳಿಯದ ನಡೆ.

ನಂಬಿಕೆ ನನ್ನ ಚರ್ಮ
ನಿಷ್ಠೆ ನನ್ನ ಬಿನ್ನಾಣ
ನಿಶ್ಚಿಂತೆ ನನ್ನ ಒನಪು ವಯ್ಯಾರ.
ಇವು ನನ್ನದೇ ಆದ, ಬದಲಾಗದ
ನೇರ ನಡೆ, ವಿಶ್ವಾಸದ ನಡೆ.

● **ದೀಪಕ ಜೋಶಿ**